ಮೂಲ ದಾವಾ ನಂ. 53-2014
ಡಿ.ಡಬ್ಲು: 1

ದಿನಾಂಕಃ 31-07-2017 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.
ಪಾಟೀ ಸವಾಲುಃ ವಾದಿ ಪರ ಎಸ್.ಆರ್.ಎಸ್ ವಕೀಲರಿಂದಃ-

5ನೇ ಪ್ರತಿವಾದಿ ನನ್ನ ಮಗಳು ಎಂದರೆ ಸರಿ. 5ನೇ ಪ್ರತಿವಾದಿಯನ್ನು 7ನೇ ಪ್ರತಿವಾದಿಯೊಂದಿಗೆ ಮದುವೆ ಮಾಡಿಕೊಟ್ಟಿದ್ದೇನೆಂದರೆ ಸರಿ. ನನಗೆ ಗಂಡು ಮಕ್ಕಳು ಇಲ್ಲ ಎಂದರೆ ಸರಿ. 5 ಮತ್ತು 7ನೇ ಪ್ರತಿವಾದಿಯರನ್ನು ಮದುವೆ ಮಾಡಿ ನನ್ನ ಮನೆಯಲ್ಲಿಯೇ ಇಟ್ಟುಕೊಂಡಿದ್ದೆ ಎಂದರೆ ಸರಿ. 5 ಮತ್ತು 7ನೇ ಪ್ರತಿವಾದಿಯರು ನನ್ನ ಸಂಪೂರ್ಣ ಸಂರಕ್ಷಣೆ ಮಾಡುತ್ತಾರೆಂದರೆ ಸರಿ. 7ನೇ ಪ್ರತಿವಾದಿ ಮದುವೆಯಾದ ನಂತರ ನಮ್ಮ ಮನೆಯಲ್ಲಿಯೇ ಉಳಿದುಕೊಂಡಿದ್ದಾನೆಂದರೆ ಸರಿ. 5 ಮತ್ತು 7ನೇ ಪ್ರತಿವಾದಿಯರು ನನ್ನ ಎಲ್ಲಾ ಆಸ್ತಿಗಳನ್ನು ಅವರೇ ಸಾಗುವಳಿ ಮಾಡುತ್ತಾರೆಂದರೆ ಸರಿ. ದಾವಾ "ಬ" ಶೆಡ್ಯೂಲ ಸ್ವತ್ತು ನನ್ನ ಸ್ವಯಾರ್ಜಿತ ಸ್ವತ್ತು ಎಂದರೆ ಸರಿ. ವಾದಿಯು ಮದುವೆಯಾದ ನಂತರ ತವರು ಮನೆಗೆ ಬಂದಾಗ ಅವಳಿಗೆ ಒಳ್ಳೆಯ ಸತ್ಕಾರ ಮಾಡುತ್ತೇವೆಂದರೆ ಸರಿ. ನಾನು ಹಣದ ಅಡಚಣೆಯಿರುವದರಿಂದ ನನ್ನ ಎಲ್ಲಾ ಹೆಣ್ಣುಮಕ್ಕಳಿಗೆ ತಿಳಿಸಿ ದಾವಾ ಸರ್ವೆ ನಂ.138ಃ2ಬ1 ಆಸ್ತಿಯನ್ನು 7ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೇನೆಂದರೆ ಸರಿ. ನಾನು 7ನೇ ಪ್ರತಿವಾದಿಯಿಂದ ಕ್ರಯದ ಬಾಬ್ತು ರೂ.2,50,000-00 ನ್ನು ಪಡೆದುಕೊಂಡಿದ್ದೇನೆಂದರೆ ಸರಿ. ದಾವಾ ''ಬ'' ಶೆಡ್ಯೂಲ ಸ್ವತ್ತನ್ನು ನನ್ನ ಒಪ್ಪಿಗೆಯಂತೆ 7ನೇ ಪ್ರತಿವಾದಿಯ ಹೆಸರಿಗೆ ವರ್ಗಾವಣೆ ಮಾಡಿದ್ದೇನೆಂದರೆ ಸರಿ.

ಮುಂದುವರಿದ ಮುಖ್ಯ ವಿಚರಣೆಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಸಿವಿಲ್ ಜಡ್ಜ್ ಕುಮಟಾ